ಎಸ್.ಡಿ.ಯು.ಎ.ಹೆಚ್.ಇ.ಆರ್ ಸಾರ್ವಜನಿಕ ಶಿಕ್ಷಣ ಸರಣಿ

# ತೆರೆ ಸರಿದ




## ಪೋಷಕರ ಕೈಪಿಡಿ

ಅ. ವೆಂ. ಸುಮಂತ್
ಷ. ಲೋಕೇಶ್ವರ್
ಮ. ಜಯರಾಮ್

## ತಂತನತೆ ಎಂದರೇನು?

ಒಂದು ಮಗು ಬೇರೆಯವರೊಡನೆ ಬೆರೆಯಲು ಹಾಗೂ ಮಾತನಾಡಲು ನಿರಾಸಕ್ತಿಯನ್ನು ತೋರುವುದು, ಸಾಮಾಜಿಕ ಸಂವಹನದಲ್ಲಿ ಕೊರತೆ ತೋರುವುದು, ಮಾತು ಹಾಗೂ ಭಾಷೆಯ ಬೆಳವಣಿಗೆಯಲ್ಲಿ ನಿಧಾನವಾಗುವುದು ಅಥವಾ ಸಮರ್ಪಕವಾದ ಬೆಳವಣಿಗೆ ಇಲ್ಲದಿರುವುದು, ಸಾಮಾಜಿಕ ಸಂಬಂಧಗಳ ಬೆಳವಣಿಗೆ ಇಲ್ಲದಿರುವಂತಹ ಸ್ಥಿತಿಯನ್ನು ತಂತನತೆ ಎನ್ನುವರು. ತಂತನತೆಯಲ್ಲಿ ವಿಭಿನ್ನ ರೀತಿಯ ದೋಷಗಳು ಹಾಗೂ ದೋಷಗಳ ಗುಣಲಕ್ಷಣಗಳಲ್ಲಿ ವ್ಯತ್ಯಾಸ ಕಂಡುಬರುವುದರಿಂದ ಇದನ್ನು "ಆಟಿಸಂ ಸ್ಪೆಕ್ಟ್ರಮ್ ಡಿಸ್ಆರ್ಡರ್ (ASD)" ಅಥವಾ "ತಂತನತಾ ಸಮುದಾಯ ದೋಷಗಳು" ಎಂದು ಕರೆಯುತ್ತಾರೆ.

## ತಂತನತೆಯು ಸುಮಾರು ಎಷ್ಟು ಮಕ್ಕಳಲ್ಲಿ ಕಂಡುಬರುವುದು?



ತಂತನತೆಯು ಸಾಮಾನ್ಯವಾಗಿ 3-6 ವಯಸ್ಸಿನ ಪ್ರತಿ 125 ಮಕ್ಕಳಲ್ಲಿ ಒಂದು ಗುವಿನಲ್ಲಿ ಮತ್ತು 6-9 ವಯಸ್ಸಿನ ಪ್ರತಿ 85 ಮಕಳಲ್ಲಿ ಒಂದು ಮಗುವಿನಲ್ಲಿ ಕಂಡುಬರುತ್ತದೆ.

## ತಂತನತೆಗೆ ಕಾರಣವೇನು?

ತಂತನತೆಗೆ ಹಲವಾರು ಕಾರಣಗಳಿವೆ. ಇದರಿಂದ ಭಾದಿತರಾದ ಬೇರೆ ಬೇರೆ ವ್ಯಕ್ತಿಗಳ ತೊಂದರೆಯ ಸಂಕೀರ್ಣತೆ ಮತ್ತು ಲಕ್ಷಣಗಳ ಆಧಾರದ ಮೇಲೆ ಅನೇಕ ಅಂಶಗಳು ತಂತನತೆಗೆ ಕಾರಣವಾಗುತ್ತವೆ ಎಂದು ಹೇಳಬಹುದು.



ಈ ತಂತನತೆಯು ಅನುವಂಶಿಕವಾಗಿ ಬರಬಹುದು. ಇದಲ್ಲದೆಯೂ ಹಲವಾರು ವಂಶವಾಹಿಗಳು ಮತ್ತು ಅವುಗಳಲ್ಲಿ ಬದಲಾವಣೆ ತಂತನತೆಗೆ ಕಾರಣವಾಗುತ್ತದೆ ಎಂದು ಹೇಳಲಾಗಿದೆ.



ವಯಸ್ಸಾದ ಪೋಷಕರಿಗೆ (35 ವರ್ಷದ ನಂತರ ಗರ್ಭವತಿಯಾಗುವ ತಾಯಿಯರಿಗೆ) ಹುಟ್ಟುವ ಮಕ್ಕಳಲ್ಲಿ ತಂತನತೆಯ ಸಂಭವತೆ ಹೆಚ್ಚು.



ದೇಹದೊಳಗಿನ ರಾಸಾಯನಿಕ ವಸ್ತುಗಳ ಸಮತೋಲನ ಹಾಗೂ ಕ್ರಿಯೆಯಲ್ಲಿ ಆಗುವ ವ್ಯತ್ಯಾಸಗಳಿಂದ ತಂತನತೆ ಬರಬಹುದು.




ಯಾವುದೇ ಕಾರಣದಿಂದ ಮಕ್ಕಳು ಚಿಕ್ಕ ವಯಸ್ಸಿನಿಂದಲೇ ಅವರ ಸಮವಯಸ್ಕರ ಜೊತೆ ಸಾಮಾಜಿಕವಾಗಿ ಬೆರೆಯುವುದು ಕಡಿಮೆ ಆದರೆ, ಅಥವಾ ಮಕ್ಕಳು ತಮ್ಮ ಹೆಚ್ಚಿನ ಸಮಯ ಮೊಬೈಲ್ ಮತ್ತು ದೂರದರ್ಶನದಂತ ಉಪಕರಣಗಳಲ್ಲಿ ತಲ್ಲೀನರಾಗುವುದರಿಂದ ಅಥವಾ ಯಾವುದೇ ಕಾರಣಗಳಿಂದ ತನ್ನ ಪೋಷಕರಿಂದ ಮತ್ತು ಕುಟುಂಬದ ಸದಸ್ಯರಿಂದ ನಿರ್ಲಕ್ಷಣೆಗೆ ಒಳಗಾದರೆ ತಂತನಂತೆ ಕಂಡುಬರಬಹುದು.



ಗರ್ಭಾವಸ್ಥೆಯಲ್ಲಿ ತಾಯಿಗೆ ಅಥವಾ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಮೇಲೆ ವಿಷಪೂರಿತ ಲೋಹ ಹಾಗೂ ಪರಿಸರದಲ್ಲಿನ ವಿಷಪೂರಿತ ಜೀವಾಣುಗಳ ಸಂಪರ್ಕ/ ಪ್ರಭಾವ ಆದರೆ ತಂತನತೆ ಕಂಡುಬರಬಹುದು.

ಗರ್ಭಾವಸ್ಥೆಯಲ್ಲಿ ತಾಯಿಗೆ ಅಥವಾ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೆ ಆಗುವ ಸೋಂಕು ತಂತನತೆ ತರುವುದು.





ಗರ್ಭವತಿ ಆಗಿರುವ ಸಮಯದಲ್ಲಿ ಕೆಲವೊಂದು ಔಷಧಿಗಳ ಸೇವನೆ ಮಾಡುವುದರಿಂದ ತಂತನತೆ ಕಂಡುಬರಬಹುದು.

## ಗುಣಲಕ್ಷಣಗಳು ಯಾವುವು?




ಸಾಮಾಜಿಕ ಸಂಬಂದಗಳ ಕೊರತೆ ಅಥವಾ ಅಸಮರ್ಪಕ ಬೆಳವಣಿಗೆ, ಸಾಮಾಜಿಕ ಸಂವಹನದಲ್ಲಿ ತೊಂದರೆಗಳು, ಮಾತು, ಕೆಲಸ ಅಥವಾ ಆಟದಲ್ಲಿ ಸರದಿ ತೆಗೆದುಕೊಳ್ಳುವ ಕೌಶಲ್ಯತೆ ಹೊಂದದಿರುವುದು, ನೇರ ನೋಟದಿಂದ ಸಂಪರ್ಕ ಮಾಡದಿರುವುದು, ಇತ್ಯಾದಿ.







ತಿರುಗುತ್ತಿರುವ ವಸ್ತುಗಳನ್ನು ನೋಡುವುದರಲ್ಲಿ ಅತೀವ ಆಸಕ್ತಿ ತೋರುವುದು (ಉದಾಹರಣೆಗೆ: ತಿರುಗುತ್ತಿರುವ ಫ್ಯಾನ್ ಅನ್ನು ನೋಡುವುದು).




ಒಂದೇ ರೀತಿಯ ವಸ್ತು ಅಥವಾ ಚಟುವಟಿಕೆಗಳಲ್ಲಿ ಆಸಕ್ತಿ ತೋರುವುದು ಅಥವಾ ಒಂದೇ ತರಹ ಇರಲು ಒತ್ತಾಯಿಸುವುದು. ಉದಾಹರಣೆಗೆ: ಪ್ರತಿದಿನವೂ ಒಂದೇ ತರಹದ ಅಥವಾ ಬಣ್ಣದ ಅಂಗಿಯನ್ನು ಹಾಕಿ ಕೊಳ್ಳಲು ಬಯಸುವುದು. ಬದಲಾವಣೆ ಅಥವಾ ಹೊಸ ವಿಷಯ / ದಿನಚರಿಯನ್ನು ಸುಲಭವಾಗಿ ಒಪ್ಪದಿರುವುದು.





ದೃಷ್ಟಿ, ಸ್ಪರ್ಶ, ರುಚಿ, ವಾಸನೆ ಅಥವಾ ಕೇಳುವಿಕೆ: ಈ ಐದು ಇಂದ್ರಿಯಗಳಲ್ಲಿ ಒಂದು ಅಥವಾ ಹೆಚ್ಚಿನದಕ್ಕೆ ಸರಿಯಾಗಿ ಪ್ರತಿಕ್ರಯಿಸದೆ ಇರುವುದು, ಅಥವಾ ಅತಿಯಾಗಿ ಪ್ರತಿಕ್ರಯಿಸುವುದು.



ಮಾತು ಮತ್ತು ಭಾಷೆಯ ಬೆಳವಣಿಗೆ: ತಂತನತೆ ಇರುವ ಮಕ್ಕಳು, ಮಾತು ಮತ್ತು ಭಾಷೆಯನ್ನು ಕಲಿಯುವುದರಲ್ಲಿ ಹಿಂದೆ ಉಳಿಯುತ್ತಾರೆ, ಮಾತಿನ ಒಳಾರ್ಥವನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುತ್ತಾರೆ, ವಾಸ್ತವಿಕತೆ ತೋರಿಸುವುದಿಲ್ಲ, ಹಾಸ್ಯ ಹಾಗೂ ಒಳಾರ್ಥಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ, ಸಮಯದ ಪರಿಕಲ್ಪನೆ ಬೆಳಸಿಕೊಳ್ಳುವುದಿಲ್ಲ, ಮಾತನಾಡುವಾಗ ಸಂದರ್ಭಕ್ಕೆ ತಕ್ಕಂತೆ ರೀತಿ ರಿವಾಜುಗಳನ್ನು ತೋರಿಸುವುದಿಲ್ಲ.





ಯಾವುದೇ ಒಂದು ವಸ್ತುವನ್ನೋ ಅಥವಾ ದಿಕ್ಕನ್ನೋ ತದೇಕಚಿತ್ತದಿಂದ ನೋಡುವುದು.



ತಾವು ಕೇಳಿಸಿಕೊಂಡ ಮಾತುಗಳನ್ನು ತಕ್ಷಣವೇ ಅಥವಾ ಸ್ವಲ್ಪ ಸಮಯದ ನಂತರ ಅದೇ ರೀತಿ ತಿರುಗಿ ಹೇಳುವುದು.




ತಮ್ಮ ದೇಹದ ಅಂಗಗಳನ್ನು ಅನುಚಿತವಾಗಿ ಅಲ್ಲಾಡಿಸುವುದು. ಉದಾಹರಣೆಗೆ: ತಲೆ ಆಡಿಸುತ್ತಿರುವುದು ಅಥವಾ ಕೈ ತಿರುಗಿಸುತ್ತಿರುವುದು ಇತ್ಯಾದಿ.





ತಮ್ಮ ತಲೆಯನ್ನು ಹೊಡೆದು ಕೊಳ್ಳುವುದು, ಕಚ್ಚುವುದು ಅಥವಾ ತಮ್ಮ ಮುಖಕ್ಕೆ ತಾವೇ ಹೊಡೆದು ಕೊಳ್ಳುವುದು - ಇಂತಹ ಸ್ವಯಂಹಾನಿಕಾರಕ ವರ್ತನೆಗಳು.





ಬೇರೆಯವರ ಭಾವನೆಗಳಿಗೆ ಸರಿಯಾದ ಪ್ರತಿಕ್ರಿಯೆ ಕೊಡದಿರುವುದು ಅಥವಾ ಭಾವನೆಗಳನ್ನು ಸರಿಯಾಗಿ ತೋರಿಸದಿರುವುದು.

ಗಣಿತವೋ, ಚಿತ್ರಕಲೆಯೋ, ಸಂಗೀತವೋ ಅಥವಾ ಇಂಥದೇ, ಇನ್ನಾವುದೋ ವಿಷಯದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರುವುದು.





ದುರ್ಬಲಗೊಂಡ ಜ್ಞಾಪಕ ಶಕ್ತಿ ಮತ್ತು ಅರಿವಿನ ಸಾಮರ್ಥ್ಯಗಳು.

ಸಣ್ಣ ಸಣ್ಣ ಅಂಶಗಳಿಗೆ ಅಥವಾ ಯಾವುದೇ ಒಂದು ವಸ್ತುವಿನ ಅಷ್ಟೇನು ಪ್ರಮುಖವಲ್ಲದ ಅಂಶಕ್ಕೆ ಅತಿಯಾಗಿ ಪ್ರಾಮುಖ್ಯತೆ ನೀಡುವ ಪ್ರವೃತ್ತಿ ಇರಬಹುದು (ಉದಾಹರಣೆಗೆ: ಆಟಿಕೆ ಬಸ್ ಅಥವಾ ವಿಮಾನದಲ್ಲಿ ಚಾಚಿಕೊಂಡಿರುವ ತಿರುಪು ಅಥವಾ ಇನ್ಯಾವುದಾದರೂ ಒಂದು ಭಾಗಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವುದು).

## ತಂತನತೆಯ ಇತರ ಲಕ್ಷಣಗಳಾವುವು?

- ಗಮನದ ಕೊರತೆ ಹಾಗೂ ಅತಿಯಾದ ಚಟುವಟಿಕೆಗಳು.
- ಇಂದ್ರಿಯಗಳ ಮೂಲಕ ಸರಿಯಾಗಿ ವಿಷಯಗಳನ್ನು ಗ್ರಹಿಸದಿರುವುದು ಅಥವಾ ಗ್ರಹಿಸಿದ ವಿಷಯಕ್ಕೆ ಸರಿಯಾಗಿ ಪ್ರತಿಕ್ರಿಯೆ ತೋರಿಸದಿರುವುದು.

- ಬುದ್ಧಿಮಾಂದ್ಯತೆ.
- ಉದ್ವೇಗದ ಸ್ಥಿತಿ: ಅತಿಯಾದ ಚಿಂತೆ, ಆತಂಕ, ಒತ್ತಡ ಅಥವಾ ಭಯದ ಭಾವನೆಗಳು, ತಂತನತೆ ಇರುವ ವ್ಯಕ್ತಿಯ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗಬಹುದು.
- ಖಿನ್ನತೆಯ ಮನಸ್ಥಿತಿಯಲ್ಲಿರುವುದು ಅಥವಾ ಯಾವ ಚಟುವಟಿಕೆಯಲ್ಲಿಯೂ ಆಸಕ್ತಿ ತೋರದಿರುವುದು.
- ಸಮನ್ವಯ ಬೆಳವಣಿಗೆಯ ಹಾಗೂ ಸುಸಂಘಟಿತ ಚಟುವಟಿಕೆಗಳನ್ನು ನಡೆಸುವಲ್ಲಿ ತೊಂದರೆ.
- ದೃಷ್ಟಿಯ ಸಂಪೂರ್ಣ ಅಥವಾ ಭಾಗಶಃ ತೊಂದರೆ.

## ತಂತನತೆಯ ಲಕ್ಷಣಗಳನ್ನು ಮೊದಲ ಬಾರಿಗೆ ಯಾವಾಗ ಕಾಣಬಹುದು?

ಮೇಲೆ ಹೇಳಿದ ಲಕ್ಷಣಗಳನ್ನು 18 ರಿಂದ 24 ತಿಂಗಳ ಒಳಗೆಯೇ ಗಮನಿಸಬಹುದು. ಆದರೂ ಸಾಮಾನ್ಯವಾಗಿ ಮಗುವಿಗೆ 30 ತಿಂಗಳು ಆಗುವುದಕ್ಕಿಂತ ಮುಂಚೆ ತಂತನತೆ ಇದೆ ಎಂದು ನಿರ್ಧರಿಸುವುದಿಲ್ಲ.

## ತಂತನತೆಯನ್ನು ಹೇಗೆ ಕಂಡುಹಿಡಿಯಲಾಗುವುದು?




ಮೊದಲನೋಟದಲ್ಲಿ, ತಂತನತೆ ಹೊಂದಿರುವ ಕೆಲವು ಮಕ್ಕಳು ಬೌದ್ಧಿಕ ವಿಕಲತೆ, ಬುದ್ಧಿಮಾಂದ್ಯತೆ, ಇಂದ್ರಿಯ ಸಂಸ್ಕರಣಾ ಸಮಸ್ಯೆಗಳು, ಶ್ರವಣ ದೋಷ ಅಥವಾ ದೃಷ್ಟಿಯ ಸಮಸ್ಯೆಗಳನ್ನು ಹೊಂದಿರುವಂತೆ ಕಾಣಿಸಬಹುದು. ವೈದ್ಯರು ಮತ್ತು ಪುನರ್ವಸತಿ ತಜ್ಞರು ಮಗುವಿನ ಬೆಳವಣಿಗೆಯ ಮೈಲಿಗಲ್ಲುಗಳು, ಭಾಷೆಯ ಬೆಳವಣಿಗೆ, ಅರಿವಿನಕೌಶಲ್ಯಗಳು, ಸಾಮಾಜಿಕ ಸಂಬಂಧಗಳ ಬೆಳವಣಿಗೆಯ ಕೌಶಲ್ಯತೆಗಳು, ಭವಿಷ್ಯದಲ್ಲಿ ತೊಂದರೆ ಉಂಟುಮಾಡುವ ಅಂಶಗಳು ಮತ್ತು ಮಗುವಿನ ಹೊಂದಿಕೊಳ್ಳುವಿಕೆಯ ಕುಶಲತೆಯನ್ನು ಪರಿಶೀಲಿಸುತ್ತಾರೆ. ಈ ಲಕ್ಷಣಗಳು ಮಗುವಿನ ವಯಸ್ಸಿಗೆ, ಬೆಳವಣಿಗೆಗೆ ಸೂಕ್ತವಾಗಿದೆಯೇ ಎಂದು ನೋಡಿ ಮಗುವಿನಲ್ಲಿ ತಂತನತೆ ಇದೆಯೋ/ಇಲ್ಲವೋ ಎಂದು ನಿರ್ಧರಿಸುತ್ತಾರೆ. ಶಿಶುವೈದ್ಯರು, ನರರೋಗತಜ್ಞರು, ಮನೋವೈದ್ಯರು, ಮನೋಶಾಸ್ತ್ರಜ್ಞರು ಮತ್ತು ವಾಕ್-ಭಾಷಾ ತಜ್ಞರು – ಈ ತಜ್ಞರಲ್ಲಿ ಯಾರು ಬೇಕಾದರೂ ಮಗುವಿನಲ್ಲಿ ತಂತನತೆಯ ಸ್ಥಿತಿಯನ್ನು ಗುರುತಿಸಬಹುದು.

## ತಂತನತೆಯನ್ನು ಗುಣಪಡಿಸಲು ಸಾಧ್ಯವೇ?

ತಂತನತೆಗೆ ಯಾವುದೇ ಸರ್ವೌಷದ ಅಥವಾ ರೋಗನಿವಾರಕ ಔಷದ / ಚಿಕಿತ್ಸೆ ಇಲ್ಲ. ಆದರೆ ಮಾತಿನ ಬೆಳವಣಿಗೆಗೆ ಮತ್ತು ನಡವಳಿಕೆ ಸರಿಮಾಡಲು ತರಬೇತಿ ನೀಡಿ, ಮಗುವಿನ ಸ್ಥಿತಿಯನ್ನು ಗಮನಾರ್ಹವಾಗಿ ಸುಧಾರಿಸಬಹುದು. ತಂತನತೆಯ ಜೊತೆ ಇರುಬಹುದಾದಂಥ ಕೆಲವು ತೊಂದರೆಗಳಿಗೆ (ಉದಾಹರಣೆ: ಅತಿಯಾದ ಚಟುವಟಿಕೆ ಅಥವಾ ನಿರ್ಲಕ್ಷತನ) ವೈದ್ಯಕೀಯ ಉಪಚಾರ ಸಾಧ್ಯವೇ ಎಂಬುದನ್ನು ವೈದ್ಯರು ನಿರ್ಧರಿಸುತ್ತಾರೆ. ಹೆಚ್ಚಿನಸಮಯ, ದೀರ್ಘಕಾಲೀನ ತರಬೇತಿಯು ಮಗುವಿನ ಸಾಮರ್ಥ್ಯಗಳಲ್ಲಿ ಗಮನಾರ್ಹ ಸುಧಾರಣೆಯನ್ನು ತರುತ್ತದೆ ಮತ್ತು ಕೆಲವು ರೋಗಲಕ್ಷಣಗಳನ್ನು ನಿವಾರಿಸುತ್ತದೆ.

## ತಂತನತೆಗೆ ಯಾರಿಂದ ಚಿಕಿತ್ಸೆ ಸಿಗುವುದು?



ವಾಕ್-ಭಾಷಾ ತಜ್ಞರು ಮಾತು, ಭಾಷೆ, ಸಂಜ್ಞಾಭಾಷೆ ಮತ್ತು ಸಾಮಾಜಿಕ ಸಂವಹನ ಕೌಶಲ್ಯತೆಗಳನ್ನು ಸುಧಾರಿಸಲು ಸಹಾಯ ಮಾಡುತ್ತಾರೆ. 'ತಂತನತಾ ಸಮುದಾಯ ನ್ಯೂನತೆಯುಳ್ಳ ಮಕ್ಕಳು ಸಂಗೀತಕ್ಕೆ ಉತ್ತಮವಾಗಿ ಸ್ಪಂದಿಸುವುದರಿಂದ ಸಂಗೀತವನ್ನು ಚಿಕಿತ್ಸೆಯ ಸಮಯದಲ್ಲಿ ಒಂದು ಬೋಧನೆಯ ಮಾರ್ಗವಾಗಿ ಬಳಸಬಹುದು.

ಅಕ್ಯುಪೇಷನಲ್ ಥೆರಪಿಸ್ಟ್ ಚಲನೆ ಮತ್ತು ಇಂದ್ರಿಯಾನುಭವದ ಸಮ್ಮಿಳಿತವನ್ನು ಊರ್ಜಿತಗೊಳಿಸುತ್ತಾರೆ. (ಉದಾಹರಣೆಗೆ: ಇಂದ್ರಿಯಾನುಭವದ ಸುಸಂಘಟನೆ, ದೈನಂದಿನ ಜೀವನದ ಚಟುವಟಿಕೆಗಳು, ಚಲನೆಯ ಕೌಶಲ್ಯಗಳು ಹಾಗೂ ಬರವಣಿಗೆ).





ಮನೋಶಾಸ್ತ್ರಜ್ಞರು ಕಲಿಕೆಯಲ್ಲಿ ತೊಂದರೆ ಉಂಟು ಮಾಡುವ ಅತಿಯಾದ ಚಟುವಟಿಕೆ ಸೇರಿದಂತೆ ನಡವಳಿಕೆಯ ಹಲವಾರು ಸಮಸ್ಯೆಗಳನ್ನು ಕಡಿಮೆ ಮಾಡುವ ಕೆಲಸಮಾಡುತ್ತಾರೆ.

ಭೌತಿಕ ಚಿಕಿತ್ಸಕರು (ಫಿಸಿಯೋಥೆರಪಿಸ್ಟ್) ಚಲನ ಕೌಶಲ್ಯತೆಗಳನ್ನು ಸುಧಾರಿಸುವ ಮತ್ತು ಸ್ನಾಯುಗಳ ಶಕ್ತಿ, ಭಂಗಿ ಮತ್ತು ಸಮತೋಲನವನ್ನು ಸುಧಾರಿಸುವ ಕೆಲಸ ಮಾಡುತ್ತಾರೆ.



ಮೂರ್ಛೆರೋಗ (ಫಿಟ್ಸ್), ತಲೆಯಗಾಯ ಮತ್ತು ಅದರಿಂದ ಉಂಟಾಗುವ ವೈದ್ಯಕೀಯ ಪರಿಸ್ಥಿತಿಗಳಿಗೆ ನರರೋಗತಜ್ಞರು ಚಿಕಿತ್ಸೆ ನೀಡುತ್ತಾರೆ.

ಮನೋವೈದ್ಯರು ಆಲೋಚನೆ, ಭಾವನೆಗಳು ಮತ್ತು ಅದಕ್ಕೆ ಸಂಬಂಧಿಸಿದ ಹಲವಾರು ನ್ಯೂನತೆಗಳಿಗೆ ಚಿಕಿತ್ಸೆ ನೀಡುತ್ತಾರೆ.



ಮಕ್ಕಳ ವೈದ್ಯರು ಸ್ಕ್ರೀನಿಂಗ್ ಪರೀಕ್ಷೆಗಳು ಮತ್ತು ಆರೋಗ್ಯ ನಿರ್ವಹಣಾ ಭೇಟಿಗಳ ಮೂಲಕ ಅಪಾಯದಲ್ಲಿರುವ ಮಕ್ಕಳನ್ನು ಗುರುತಿಸುತ್ತಾರೆ. ತಂತನತೆಯ ಜೊತೆಯಲ್ಲಿ ಇರಬಹುದಾದ ತೊಂದರೆಗಳು ಹಾಗೂ ವೈದ್ಯಕೀಯ ಪರಿಸ್ಥಿತಿಗಳಿಗೆ ಚಿಕಿತ್ಸೆನೀಡುತ್ತಾರೆ. ಸಾಮಾನ್ಯವಾಗಿ ಇವರು ಮಕ್ಕಳ ಆರೋಗ್ಯಕ್ಕೆ ಜವಾಬ್ದಾರರಾಗಿರುತ್ತಾರೆ ಮತ್ತು ತಂತನತೆಗೆ ಸಂಬಂಧಪಟ್ಟ ಇತರ ತಜ್ಞರ ಬಳಿಗೆ ಹೆಚ್ಚಿನ ತಪಾಸಣೆ / ಚಿಕಿತ್ಸೆಗಾಗಿ ಕಳುಹಿಸುತ್ತಾರೆ.

ಪ್ರಾಥಮಿಕ ಆರೈಕೆ ನೀಡುವವರು ASDಯ ರೋಗಲಕ್ಷಣಗಳನ್ನು ಗುರುತಿಸಿ, ಸೂಕ್ತ ತಜ್ಞರ ಪರಾಮರ್ಶೆಗೆ ಕಳುಹಿಸುತ್ತಾರೆ ಮತ್ತು ಸಮುದಾಯ ಮಟ್ಟದಲ್ಲಿ ಮಗುವಿಗೆ ತಜ್ಞರು ಹೇಳಿದ ಸಲಹೆಗಳನ್ನು ಕಾರ್ಯಗತಗೊಳಿಸುತ್ತಾರೆ.

## ತಂತನತೆಯುಳ್ಳ ಮಕ್ಕಳಿಗೆ ಆದಷ್ಟು ಬೇಗನೇ ತರಬೇತಿ ಶುರು ಮಾಡುವುದರಿಂದ ಆಗುವ ಪ್ರಯೋಜನೆಗಳೇನು?

- ಉತ್ತಮ ಸಾಮಾಜಿಕ ಸಂವಹನ ಕೌಶಲ್ಯತೆಗಳ ಬೆಳವಣಿಗೆ
- ವಾಕ್ - ಭಾಷಾ ಕೌಶಲ್ಯತೆಗಳ ಬೆಳವಣಿಗೆ
- ತಮ್ಮ ಅಗತ್ಯತೆಗಳನ್ನು ಮೌಖಿಕವಾಗಿ ಅಥವಾ ಸಂಜ್ಞೆಯ ಮೂಲಕ ತಿಳಿಸುವ ಕೌಶಲತೆಯ ಬೆಳವಣಿಗೆ
- ಮಾತಿನ ಸೂಚನೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯದ ಬೆಳವಣಿಗೆ
- ಸಾಮಾಜಿಕ ಸಂಬಂಧ, ನಡುವಳಿಕೆ ಮತ್ತು ಭಾಷೆಯಲ್ಲಿ ಸಂದರ್ಭಕ್ಕೆ ತಕ್ಕ ರೀತಿ ರಿವಾಜಿನ ಬೆಳವಣಿಗೆ
- ಇಂದ್ರಿಯಾನುಭವದ ಕೊರತೆಯಿಂದ ಹೊರಬರಬಹುದು
- ಸಾಮಾನ್ಯ ಮಕ್ಕಳಂತೆ ಶಾಲೆಗೆ ಹೋಗಬಹುದು
- ಅವನ/ಅವಳ ಅತಿಯಾದ ಚಟುವಟಿಕೆಯ ವರ್ತನೆಯ ಮೇಲೆ ನಿಯಂತ್ರಣವನ್ನು ಬೆಳೆಸಿಕೊಳ್ಳಬಹುದು
- ತಂತನತೆ ಹಾಗೂ ಅದರ ಸಮುದಾಯ ನ್ಯೂನತೆಗಳಲ್ಲಿ ಗಮನಾರ್ಹ ಸುಧಾರಣೆ



## ತಂತನತೆಯ ಪರಿಸ್ಥಿತಿಗೆ ಚಿಕಿತ್ಸೆ ಇಲ್ಲದೆ/ನೀಡದೆ ನಿರ್ಲಕ್ಷಿಸಿದರೆ ಏನಾಗುತ್ತದೆ?

ASD ಹೊಂದಿರುವ ಮಕ್ಕಳಿಗೆ ಚಿಕಿತ್ಸೆ ನೀಡದಿದ್ದರೆ:

- ಮಾತು-ಭಾಷೆಯ ಬೆಳವಣಿಗೆ, ಉಪಯೋಗ ಹಾಗೂ ಅದನ್ನು ಅರ್ಥಮಾಡಿಕೊಳ್ಳುವಿಕೆ ಸಾಧ್ಯವಾಗುವುದಿಲ್ಲ
- ಪರಿಣಾಮಕಾರಿಯಾದ ಸಾಮಾಜಿಕ ಕೌಶಲ್ಯತೆಗಳನ್ನು ಮತ್ತು ಸರಿಯಾದ ನಡವಳಿಕೆಯನ್ನು ಕಲಿಯುವುದಿಲ್ಲ
- ಜೀವನದಲ್ಲಿ ಸ್ವತಂತ್ರವಾಗಿ ಬದುಕಲು ಸಾಧ್ಯವಾಗುವುದಿಲ್ಲ
- ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕಷ್ಟವಾಗುತ್ತದೆ
- ಅವರ ಶೈಕ್ಷಣಿಕ, ಸಾಮಾಜಿಕ ಬದುಕು ಮತ್ತು ಉದ್ಯೋಗಾವಕಾಶಗಳ ಮೇಲೆ ನಕಾರಾತ್ಮಕವಾದ ಪ್ರಭಾವ ಆಗುತ್ತದೆ
- ತಂತನತೆಯುಳ್ಳ ಮಕ್ಕಳು ಅವರ ಕುಟುಂಬದ ಮೇಲೆ ಆರ್ಥಿಕವಾಗಿ ಮತ್ತು ಭಾವನಾತ್ಮಕವಾಗಿ ಹೊರೆಯಾಗಬಹುದು

## ತಂತನತೆಯುಳ್ಳ ವ್ಯಕ್ತಿಗಳಿಗೆ ಉತ್ತಮ ಗುಣಮಟ್ಟದ ಜೀವನವನ್ನು ಹೇಗೆ ಕಲ್ಪಿಸಬಹುದು?

ಕೆಳಗಿನ ಅಂಶಗಳನ್ನು ಅನುಸರಿಸುವ ಮೂಲಕ ತಂತನಂತೆ ಹೊಂದಿರುವ ಜನರಿಗೆ ನಾವು ಉತ್ತಮ ಜೀವನ ಮಟ್ಟವನ್ನು ಒದಗಿಸಬಹುದು.

- ತಂತನತೆಯುಳ್ಳವರನ್ನು ಗೌರವ ಹಾಗೂ ಆದರದಿಂದ ನೋಡುವುದು
- ತಂತನಂತೆಯುಳ್ಳ ವ್ಯಕ್ತಿಗಳನ್ನು ಅವರವರ, ಶಾಲೆಗಳಲ್ಲಿ, ಕೆಲಸದ ಸ್ಥಳಗಳಲ್ಲಿ ಮತ್ತು ಸಮುದಾಯದಲ್ಲಿ ಭಾಗವಾಗುವಂತೆ ಪ್ರೋತ್ಸಾಹಿಸುವುದು



- ತಂತನತೆಯುಳ್ಳವರು ಸಂವಹನ ನಡೆಸಲು, ತಮ್ಮನ್ನು ತಾವು ವ್ಯಕ್ತ ಪಡಿಸಲು ಮತ್ತು ಇತರರೊಂದಿಗೆ ಬೆರೆಯುವುದಕ್ಕೆ ಅವಕಾಶ ಕಲ್ಪಿಸುವುದು
- ತಂತನತೆಯುಳ್ಳವರು ಆರೋಗ್ಯವಾಗಿರಲು ಅಗತ್ಯವಿರುವ ಸೇವೆಗಳನ್ನು ಒದಗಿಸುವುದು
- ತಂತನತೆಯುಳ್ಳವರು ಸುರಕ್ಷಿತವಾಗಿರುವಂತೆ ಮತ್ತು ಅಗತ್ಯವಿದ್ದಾಗ ಅವರ ಸಮುದಾಯಗಳಿಂದ ಹಾಗೂ ಕಾನೂನು ಸಂಸ್ಥೆಗಳಿಂದ ಅಗತ್ಯ ಸಹಾಯ ಒದಗಿಸುವುದು
- ತಂತನತೆಯುಳ್ಳವರು ಶಾಲೆಗಳಲ್ಲಿ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿ, ವಿವಿಧ ರೀತಿಯ ಪರಿಸರಗಳಲ್ಲಿ ಕಲಿತು ಯಶಸ್ವಿಯಾಗಲು ಮತ್ತು ಭಾಗವಹಿಸಲು ಅವಕಾಶಗಳನ್ನುಕಲ್ಪಿಸುವುದು
- ತಂತನತೆಯುಳ್ಳವರು ತಮ್ಮ ಸ್ನೇಹಿತರು ಮತ್ತು ಬೆಂಬಲಿಗರ ಜೊತೆ ಸಹಬಾಳ್ವೆ ಮಾಡುವಂತೆ ಮತ್ತು ಅವರ ಸಮುದಾಯಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದುವಂತೆ ಸಹಾಯಮಾಡುವುದು
- ತಂತನತೆಯುಳ್ಳವರು ತಮ್ಮ ಜೀವನವನ್ನು ತಾವೇ ನಡೆಸುವುದಕ್ಕೆ ಸಹಾಯ ಒದಗಿಸುವುದು
- ತಂತನತೆಯುಳ್ಳವರಿಗೆ ಕೆಲಸ ಮಾಡಲು ಅವಕಾಶಗಳನ್ನು ಕಲ್ಪಿಸಿ ಮತ್ತು ಅವರ ಸ್ಥಾನಮಾನಗಳಿಗೆ ಸೂಕ್ತವಾದ ಮತ್ತು ಲಾಭದಾಯಕವಾದ ಪರಿಹಾರವನ್ನು ದೊರಕಿಸಿಕೊಡುವುದು
- ತಂತನತೆಯುಳ್ಳವರು ತಮ್ಮ ಆಸಕ್ತಿಗಳನ್ನು, ಚಟುವಟಿಕೆಗಳನ್ನ ಮುಂದುವರಿಸಲು ಮತ್ತು ತಮ್ಮ ಬಿಡುವಿನ ವೇಳೆಯನ್ನು ಅರ್ಥಪೂರ್ಣ ರೀತಿಯಲ್ಲಿ ಕಳೆಯುವಂತೆ ಪ್ರೋತ್ಸಾಹಿಸುವುದು
- ತಂತನತೆಯುಳ್ಳವರು ತಮ್ಮನ್ನು ತಾವು ಅರ್ಥ ಮಾಡಿಕೊಂಡು, ತಮ್ಮ ಕೆಲಸದಲ್ಲಿ ಹೆಮ್ಮೆಪಟ್ಟುಕೊಂಡು ಇತರರಿಂದ ಗೌರವ ಸಂಪಾದಿಸಿಕೊಳ್ಳುವುದಕ್ಕೆ ಪ್ರೋತ್ಸಾಹಿಸುವುದು
- ತಂತನತೆಯುಳ್ಳವರಿಗೆ ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಒದಗಿಸುವುದು
- ತಂತನತೆಯುಳ್ಳವರು ತಮ್ಮ ಆಕಾಂಕ್ಷೆಗಳನ್ನು ಸಾಧಿಸುವಂತೆ ಅವರನ್ನು ಸಬಲೀಕರಣಗೊಳಿಸುವುದು

## ತಂತನತೆಯನ್ನು ಹೇಗೆ ತಡೆಗಟ್ಟಬಹುದು?

ತಂತನತೆಯನ್ನು ತಡೆಗಟ್ಟಲು ಯಾವುದೇ ರೀತಿಯ ನಿಖರವಾದ ವಿಧಾನಗಳು ಇಲ್ಲ. ಆದರೆ ಈ ಕೆಳಗಿನಂತೆ ಜೀವನಶೈಲಿಯಲ್ಲಿ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಆರೋಗ್ಯಕರ ಮಗುವನ್ನು ಹೊಂದುವ ಸಾಧ್ಯತೆಯನ್ನು ಹೆಚ್ಚಿಸಬಹುದು:

- ಸಮತೋಲನ ಆಹಾರ ಹಾಗೂ ಶುದ್ಧ ನೀರಿನ ಸೇವನೆ, ಸ್ವಚ್ಛ ಪರಿಸರದಲ್ಲಿ ವಾಸ, ನಿಯಮಿತವಾಗಿ ಆರೋಗ್ಯ ತಪಾಸಣೆ, ನಿತ್ಯ ವ್ಯಾಯಾಮ.
- ಗರ್ಭಿಣಿ ತಾಯಿಗೆ ಒಳ್ಳೆಯ ಆಹಾರ ಹಾಗೂ ಶುಚಿಯಾದ ಪರಿಸರ ಒದಗಿಸಿ.
- ತಾಯಿಯಾಗುವ ನಿರೀಕ್ಷೆಣೆಯಲ್ಲಿರುವ ಎಲ್ಲಾ ಮಹಿಳೆಯರಿಗೆ ಅವರ ವೈದ್ಯಕೀಯ ತೊಂದರೆಗಳಿಗೆ ಸರಿಯಾದ ಚಿಕಿತ್ಸೆಯನ್ನು ಒದಗಿಸಿ.
- ನಿರೀಕ್ಷಿತ ತಾಯಂದಿರಿಗೆ ಮತ್ತು ನವಜಾತ ಶಿಶುಗಳಿಗೆ ಸೂಕ್ತ ಸಮಯದಲ್ಲಿ ಸೋಂಕುನಿರೋಧಕ ಲಸಿಕೆ ನೀಡಿ.



- ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯರಿಗೆ ಗರ್ಭಿಣಿಯಾಗುವ ಮೊದಲು ಜರ್ಮನ್ ದಡಾರಕ್ಕೆ (ರುಬೆಲ್ಲಾ) ಸೋಂಕು ನಿರೋಧಕ ಲಸಿಕೆ ಸಿಗುವಂತೆ ನೋಡಿಕೊಳ್ಳಬೇಕು. ಇದರಿಂದ ರುಬೆಲ್ಲಾ-ಸಂಬಂಧಿತ ತಂತನತೆಯನ್ನು ತಡೆಯಬಹುದು.
- ತಂತನತೆ ಇರುವುದು ಖಚಿತವಾದ ನಂತರ ಆದಷ್ಟು ಬೇಗ ಅವಶ್ಯಕವಾದ ತರಬೇತಿ ಮತ್ತು ಚಿಕಿತ್ಸೆಯನ್ನು ಶುರುಮಾಡಬೇಕು. ಅದರ ಜೊತೆಗೆ ಮಗುವು ತನ್ನ ಸಮವಯಸ್ಕರ ಮಕ್ಕಳೊಂದಿಗೆ ಮತ್ತು ವಯಸ್ಕರರ ಜೊತೆ ಒಡನಾಟ ಮಾಡುತ್ತಿದೆಯೆಂದು ಖಾತರಿಪಡಿಸಿಕೊಳ್ಳಿ. ಆದರಿಂದ ಮಕ್ಕಳ ಸಾಮಾಜಿಕರಣ ಕೌಶಲ್ಯತೆಗಳು ಚಿಕ್ಕ ವಯಸ್ಸಿನಿಂದಲೇ ಉತ್ತಮ ಬೆಳವಣಿಗೆ ಹೊಂದಲು ಸಹಾಯವಾಗುತ್ತದೆ.



- ತಂತನತೆಯುಳ್ಳ ಮಕ್ಕಳಲ್ಲಿರಬಹುದಾದ ಅಸಾಧಾರಣ ಪ್ರತಿಭೆಯನ್ನು (ಉದಾಹರಣೆ: ಚಿತ್ರಕಲೆ, ಅಥವಾ ಸಂಗೀತ ಅಥವಾ ಬರವಣಿಗೆಯ ಕೌಶಲ್ಯ) ಗುರುತಿಸಿ ಅದನ್ನು ಉತ್ತೇಜಿಸಿ, ಶ್ರೀಮಂತಗೊಳಿಸುವುದರಿಂದ, ಮಕ್ಕಳ ಸರ್ವತೋಮುಖ ಬೆಳವಣಿಗೆ ಸುಲಭವಾಗುತ್ತದೆ.

## ತಂತನತೆಯುಳ್ಳ ಮಕ್ಕಳಿಗೆ ಇರುವ ಸೌಲಭ್ಯಗಳು:

"ತಂತನಂತೆ, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಕಲಾಂಗತೆ ಹೊಂದಿರುವ ವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ಟ್ರಸ್ಟ್, ಭಾರತದ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಒಂದು ಶಾಸನಬದ್ಧ ಸಂಸ್ಥೆ, ಇದು ತಂತನತೆ ಇರುವ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಹಲವಾರು ಕಾರ್ಯಕ್ರಮಗಳ ಮೂಲಕ ಶ್ರಮಿಸುತ್ತಿದೆ.

ಕೆಳಕಂಡವುಗಳು ಈ ಸಂಸ್ಥೆಯ ಕೆಲವು ಯೋಜನೆಗಳು:

- ನ್ಯಾಷನಲ್ ಟ್ರಸ್ಟ್ ಐಸಿಐಸಿಐ ಭಾಗಿತ್ವದೊಂದಿಗೆ ನಿರಮಯ ಆರೋಗ್ಯ ವಿಮೆಯನ್ನುಶುರುಮಾಡಿದೆ. ಈ ನೀತಿಯು ತಂತನತೆಯುಳ್ಳ ಮಕ್ಕಳ ಮತ್ತು ಇತರೆ ಅಂಗವೈಕಲ್ಯ ಇರುವ ಮಕ್ಕಳ ಅಭಿವೃದ್ಧಿ ಕಲ್ಯಾಣಕ್ಕಾಗಿ ಒಂದು ಲಕ್ಷದವರೆಗೆ ಆರೋಗ್ಯ ವಿಮೆಯನ್ನು ಒದಗಿಸುತ್ತದೆ.
  ಈ ನೀತಿಯು ಕೆಳಕಂಡ ಸೇವೆಗಳನ್ನು ಒಳಒದಗಿಸುತ್ತದೆ:
  - ಅಸ್ತಿತ್ವದಲ್ಲಿರುವ ಅಂಗವೈಕಲ್ಯತೆಯನ್ನು ಸರಿಪಡಿಸಿಕೊಳ್ಳಲು ಬೇಕಾದ ಶಸ್ತ್ರಚಿಕಿತ್ಸೆ
  - ಆಸ್ಪತ್ರೆಗೆ ದಾಖಲೆ
  - ಹೊರರೋಗಿಗಳ ಚಿಕಿತ್ಸೆ ಮತ್ತು ಸೌಲಭ್ಯಗಳನ್ನು
  - ನಿಯಮಿತ ವೈದ್ಯಕೀಯ ತಪಾಸಣೆ
  - ದಂತಕ್ಷಯ ತಡೆಗಟ್ಟುವಿಕೆ
  - ತರಬೇತಿಗಾಗಿ ಧನಸಹಾಯ
  - ಪರ್ಯಾಯ ಔಷಧಿಗಳನ್ನು ಖರೀದಿಸಲು ಧನಸಹಾಯ
  - ಸಾರಿಗೆ ಖರ್ಚುಗಳನ್ನುನಿಭಾಯಿಸಲು ಧನಸಹಾಯ



- ತಂತನತೆಯುಳ್ಳ ವ್ಯಕ್ತಿಗಳಿಗೆ Gharaunda ಯೋಜನೆಯ ಕೆಳಗೆ ವಸತಿ ಅನುದಾನ: ಇದು, ಅಂಗವೈಕಲ್ಯತೆಯುಳ್ಳ ವ್ಯಕ್ತಿಗಳಿಗೆ ಜೀವನಪೂರ್ತಿ ಆರೈಕೆಯ ಆಶ್ರಯವನ್ನು ಒದಗಿಸುವ ಯೋಜನೆ.



- ದಿಶಾ ಯೋಜನೆ: ಈ ಯೋಜನೆಯು, ಅಂಗವೈಕಲ್ಯತೆಯುಳ್ಳ ಮಕಳ್ಳನ್ನು ಆರಂಭಿಕ ಹಂತದಲ್ಲಿಯೇ, ಅಂದರೆ 1-10ರ ವಯಸ್ಸಿನಲ್ಲಿಯೇ ಗುರುತಿಸಿ, ಅವರಿಗೆ ತರಬೇತಿ ಮತ್ತು ಚಿಕಿತ್ಸೆಯನ್ನು ನೀಡಲು ಸಹಾಯ ಮಾಡುತ್ತದೆ.
  ಹೆಚ್ಚಿನಮಾಹಿತಿಗೆ ಈ ವೆಬ್ ಸೈಟನ್ನು ವೀಕ್ಷಿಸಿ -
  http://thenationaltrust.gov.in/content/scheme/disha.php



- ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳ ಕಾಯ್ದೆ 2016 (Rights of Persons with Disabilities Act 2016): ಈ ಕಾಯ್ದೆಯಡಿಯಲ್ಲಿ ಅಂಗವೈಕಲ್ಯತೆ ಇರುವ ವ್ಯಕ್ತಿಗಳಿಗೆ ಸಿಗುವ ಎಲ್ಲಾ ಸೌಲಭ್ಯ, ಸಹಾಯ ಹಾಗೂ ಸಲಹೆಗಳು ತಂತನತೆ ಇರುವ ವ್ಯಕ್ತಿಗಳಿಗೂ ಕೂಡ ಲಭ್ಯವಿವೆ.
  ಹೆಚ್ಚಿನಮಾಹಿತಿಗೆ ಈ ವೆಬ್ ಸೈಟನ್ನು ವೀಕ್ಷಿಸಿ:
  http://www.tezu.ernet.in/PwD/RPWD-ACT-2016.pdf



- ಸರ್ಕಾರದ ಸಚಿವಾಲಯಗಳು ಹಾಗೂ ಇತರ ವಿಭಾಗಗಳಿಂದ ಒದಗಿಸಲ್ಪಟ್ಟ ಈ ಮೇಲ್ಕಂಡ ಯೋಜನೆಗಳ ಹಾಗೂ ಸೌಲಭ್ಯಗಳ ಲಾಭಗಳನ್ನು ಪಡೆಯಬೇಕೆಂದರೆ, ವಿಶಿಷ್ಟ ಅಂಗವೈಕಲ್ಯತೆ ಗುರುತಿನ ಕಾರ್ಡ್ ಅಥವಾ ಅಂಗವೈಕಲ್ಯದ ಪ್ರಮಾಣಪತ್ರವನ್ನು ಹೊಂದಿರುವುದು ಅವಶ್ಯಕ.
  ಹೆಚ್ಚಿನಮಾಹಿತಿಗೆ ಈ ವೆಬ್ ಸೈಟನ್ನು ವೀಕ್ಷಿಸಿ- http://www.swavlambancard.gov.in/

## ತಂತನತೆ ಇರುವ ಮಕ್ಕಳಿಗೆ ನೀವು ಎಲ್ಲಿ ಸೇವೆಗಳನ್ನು ಪಡೆಯಬಹುದು?

ಕೋಲಾರ ಜಿಲ್ಲೆಯ ಟಮಕ ಗ್ರಾಮದಲ್ಲಿರುವ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ವಾಕ್-ಶ್ರವಣ ವಿಭಾಗದಲ್ಲಿ ತಂತನತೆ ಇರುವ ನಿಮ್ಮ ಮಕ್ಕಳಿಗೆ ಸೇವೆಗಳನ್ನು ಪಡೆಯಬಹುದು. ಈ ವಿಭಾಗವು ಸಂಸ್ಥೆಯ CARE ಎಂಬ ಹೆಸರಿನ ಕಟ್ಟಡದ ನಾಲ್ಕನೆಯ ಮಹಡಿಯಲ್ಲಿದೆ.

## ನಮ್ಮ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳು:

ವಾಕ್-ಶ್ರವಣ ವಿಭಾಗವು ಮಾತು, ಭಾಷೆ ಮತ್ತು ಕೇಳುವಿಕೆಗೆ ಸಂಬಂಧಪಟ್ಟ ಪರೀಕ್ಷೆ ಮತ್ತು ನಿರ್ವಹಣೆಗೆ ಅವಶ್ಯವಿರುವ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ತಂತನತೆಯನ್ನು ಪತ್ತೆ ಹಚ್ಚಲು ಮತ್ತು ಅದರ ತೀವ್ರತೆಯನ್ನು ನಿರ್ಧರಿಸಲು, ನಂತರ ಮಾತು–ಭಾಷಾ ತರಬೇತಿಯನ್ನು ನೀಡಲು ನಮ್ಮಲ್ಲಿ ಸೌಲಭ್ಯಗಳಿವೆ.



ನಮ್ಮ ವಿಶ್ವವಿದ್ಯಾನಿಲಯವು ಆಸ್ಪತ್ರೆಯನ್ನು ಕೂಡ ಹೊಂದಿರುವುದರಿಂದ, ನೀವು ಒಂದೇ ಸೂರಿನಡಿಯಲ್ಲಿ ಮಕ್ಕಳ ವೈದ್ಯರ, ಮನೋಶಾಸ್ತ್ರಜ್ಞರ, ಮನೋವೈದ್ಯರ ಮತ್ತು ಭೌತಚಿಕಿತ್ಸಕರ ಸೇವೆಗಳನ್ನೂ ಕೂಡ ಪಡೆಯಬಹುದು.




ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ವಾಕ್ ಶ್ರವಣ ವಿಭಾಗ**

ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ.

ಟಮಕ, ಕೋಲಾರ - 563103

ಫೋನ್: 9448395231 (ext - 276), 08152243240

ಇಮೇಲ್ ಐಡಿ: spa@sduu.ac.in

ವೆಬ್ ಸೈಟ್: www.sduu.ac.in